


ದೊಡ್ಡ ನೋಟಿನ ನಿಷೇಧದಿಂದ ಮುಗಿಯದ ಗೋಳು..

ದೇಶದ ರಾಜಧಾನಿ ದೆಹಲಿಯಲ್ಲಿ ಭಾರೀ ಪ್ರಮಾಣದ ಪರಿಸರ ಮಾಲಿನ್ಯ ಉಂಟಾಗಿದೆ ಎನ್ನುವ ಕೂಗಿನೊಂದಿಗೆ ಆರಂಭವಾದ ವರ್ಷ 2016. ದೆಹಲಿಯ ವಾತಾವರಣದಲ್ಲಿ ಪಸರಿಸುವ ದಟ್ಟ ಹೊಗೆ ಮತ್ತು ಧೂಳು ಅಲ್ಲಿನ ಜನಜೀವನದ ಮೇಲೂ ದೊಡ್ಡ ಪರಿಣಾಮವನ್ನು ಬೀರಿದೆ. ಪರಿಸರ ಮಾಲಿನ್ಯವನ್ನು ತಗ್ಗಿಸಲು ವಾಹನಗಳ ಮೇಲೆ ನಿಯಂತ್ರಣ ಹೇರುವುದೊಂದೇ ದಾರಿ ಎಂಬ ನಿರ್ಧಾರಕ್ಕೆ ಬಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ರಾಜ್ಯ ಸರಕಾರ, 'ಬೆಸ ಮತ್ತು ಸರಿ ಸಂಖ್ಯೆಗಳ ಯೋಜನೆ'ಯನ್ನು ಜಾರಿಗೊಳಿಸಿತು. ಇದರ ಪ್ರಕಾರ, ಒಂದು ದಿನ ಬೆಸ (ನೋಂದಣಿ) ಸಂಖ್ಯೆಯ ವಾಹನಗಳು ಮಾತ್ರ ರಸ್ತೆಗಿಳಿದರೆ, ಇನ್ನೊಂದು ದಿನ ಸರಿ ಸಂಖ್ಯೆಯ ವಾಹನಗಳು ಮಾತ್ರ ರಸ್ತೆಗಿಳಿಯಬೇಕು. ಮಹಿಳೆಯರು ಚಲಾಯಿಸುವ ಮತ್ತು ವಯೋವೃದ್ಧರು ಇರುವ ವಾಹನಗಳಿಗೆ ವಿನಾಯ್ತಿ ನೀಡಿ ಜಾರಿಯಾದ ಈ ಯೋಜನೆ ದೇಶದಾದ್ಯಂತ ಸುದ್ದಿಯಾಯಿತು. ವರ್ಷದ ಮೊದಲ ಎರಡು ವಾರ ದೇಶದ ಎಲ್ಲ ಮಾಧ್ಯಮಗಳಲ್ಲೂ ದೆಹಲಿಯ ರಸ್ತೆಗಳದ್ದೇ ಫೋಟೋ ಮತ್ತು ವೀಡಿಯೊಗಳು! 15 ದಿನಗಳ ಈ ಮಹಾಸರ್ಕಸ್ ಯಶಸ್ವಿಯಾಗಿ ಮುಗಿಯಿತು. ದೆಹಲಿಯ ಪರಿಸರ ಮಾಲಿನ್ಯದ ಮಟ್ಟ ಈ ಅವಧಿಯಲ್ಲಿ ಗಣನೀಯವಾಗಿ ತಗ್ಗಿತು. ಯೋಜನೆ ಎಷ್ಟು ಯಶಸ್ವಿ ಆಯಿತೆಂದರೆ ಮತ್ತೆ ಏಪ್ರಿಲ್ ತಿಂಗಳಲ್ಲಿ ಎರಡು ವಾರ ದೆಹಲಿ ಸರ್ಕಾರ ಇದೇ ನಿಯಮವನ್ನು ಜಾರಿಗೊಳಿಸಿತು.

ಭಾರತದ ಮಟ್ಟಿಗೆ ಇದೊಂದು ಹೊಸ ಪ್ರಯೋಗವೇ. 90ರ ದಶಕದಲ್ಲಿ

